# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

("ವಿಟಿಯು ಅಧಿನಿಯಮ ೧೯೯೪"ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)

# Visvesvaraya Technological University

(State University of Government of Karnataka Established as per the VTU Act, 1994)

## "Jnana Sangama", Belagavi – 590 018, Karnataka, India

**Prof. A.S. Deshpande** B.E., M.Tech, Ph.D
**REGISTRAR**

**Phone No: (0831)2498100**
**Fax: ( 0831)2405467**


*Ref:-VTU/BGM/Prasaranga /2020-21/* 3197

*Date:* 26 OCT 2021

**<u>ಸುತ್ತೋಲೆ</u>**

ಇವರಿಗೆ-
ಪ್ರಾಂಶುಪಾಲರು,
ವಿತಾವಿಯ ಸಂಯೋಜಿತ/ಸ್ವಾಯತ್ತ /ಘಟಕ ಕಾಲೇಜುಗಳು.

ವಿಷಯ:- ವಿತಾವಿಯಿಂದ ಪ್ರಕಟಿಸಿರುವ "ಸಾಂಸ್ಕೃತಿಕ ಕನ್ನಡ ಮತ್ತು ಬಳಕೆ ಕನ್ನಡ ಪಠ್ಯಪುಸ್ತಕಗಳನ್ನು ಖರೀದಿಸುವ" ಕುರಿತು.

ಉಲ್ಲೇಖ:-1) ವಿತಾವಿ/ಬೆಳಗಾವಿ/ಪ್ರಸಾರಂಗ/2020-21/4026 ದಿನಾಂಕ:01-12-2020.
2) ವಿತಾವಿ/ಬೆಳಗಾವಿ/ಪ್ರಸಾರಂಗ/2020-21/5566 ದಿನಾಂಕ:30-01-2021.

ಮಾನ್ಯರೆ,

ಮೇಲ್ಕಾಣಿಸಿದ ವಿಷಯದನ್ವಯ ವೃತ್ತಿಪರ ಶಿಕ್ಷಣದಲ್ಲಿ (ಇಂಜಿನಿಯರಿಂಗ್ ವಿಭಾಗ) ಕನ್ನಡವನ್ನು ಕಡ್ಡಾಯವಾಗಿ ಬೋಧಿಸುವ ಸಲುವಾಗಿ ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯು ಪ್ರಸಾರಂಗದ ಮೂಲಕ **<u>ಸಾಂಸ್ಕೃತಿಕ ಕನ್ನಡ</u>** (ಕನ್ನಡ ಬಲ್ಲವರಿಗೆ) ಹಾಗೂ **<u>ಬಳಕೆ ಕನ್ನಡ</u>** (ಕನ್ನಡೇತರಿಗೆ) ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಿದೆ. ಬಿ.ಇ/ಬಿ.ಟೆಕ್/ಬಿ.ಪ್ಲಾನ್‌ನ <u>3/4ನೇ ಸೆಮಿಸ್ಟರ್</u> ವಿದ್ಯಾರ್ಥಿಗಳು ಹಾಗೂ ಬಿ.ಆರ್ಕಿಟೆಕ್ಚರ್ <u>2 ನೇ ಸೆಮಿಸ್ಟರ್</u> ವಿದ್ಯಾರ್ಥಿಗಳು, ಕನ್ನಡವನ್ನು ಕಡ್ಡಾಯವಾಗಿ ಓದ ಬೇಕಾಗಿದ್ದು, ಸದರಿ ಪುಸ್ತಕಗಳು ಸೂಕ್ತವಾಗಿವೆ. ಆದ್ದರಿಂದ ಶೈಕ್ಷಣಿಕ ವರ್ಷ 2021-22ಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣುವಾಗಿ ಪುಸ್ತಕಗಳನ್ನು ಖರೀದಿಸಲು ಆದೇಶಿಸಲಾಗಿದೆ.

- <u>ಸಾಂಸ್ಕೃತಿಕ ಕನ್ನಡ</u> ಪುಸ್ತಕ ಪ್ರತಿ ಒಂದರ ಬೆಲೆ ರೂ.50/-
- <u>ಬಳಕೆ ಕನ್ನಡ ಪುಸ್ತಕ</u> ಪ್ರತಿ ಒಂದರ ಬೆಲೆ ರೂ.60/ ಆಗಿರುತ್ತದೆ.

**<u>ಸದರಿ ಪುಸ್ತಕಗಳನ್ನು ಆನ್ ಲೈನ್ ಮುಖಾಂತರ ಖರೀದಿಸುವ ಪ್ರಕ್ರಿಯೆ ಈ ಕೆಳಗಿನಂತಿದೆ.</u>**

1) https://prasaranga.vtu.ac.in ಈ ವೆಬಸೈಟ್ ನ್ನು ತೆರೆಯುವುದು
2) ಆಯಾ ಕಾಲೇಜಿನ ಪ್ರಾಂಶುಪಾಲರುಗಳು ಪರೀಕ್ಷಾ ಕೆಲಸಕ್ಕೆ ಬಳಸುವ ಕ್ರೆಡೆನ್ಸಿಯಲ್ ಮೂಲಕ ಲಾಗಿನ್ ಆಗುವುದು.
3) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪುಸ್ತಕಗಳ ಸಂಖ್ಯೆಗಳನ್ನು ನಮೂದಿಸುವುದು.
4) ಸಂಬಂಧಿಸಿದ ಒಟ್ಟು ಮೊತ್ತವನ್ನು ಆನ್ ಲೈನ್ (Online) ಎಸ್.ಬಿ.ಐ. ಕಲೆಕ್ಟ್ ಮುಖಾಂತರ PRASARANGA-KANNADA TEXT BOOKS ಎಂಬ ಹೆಡ್ ಆಯ್ಕೆ ಮಾಡಿ ಹಣವನ್ನು ಪಾವತಿಸುವುದು.
5) ಹಣ ಪಾವತಿಯ ಈ ಮಾಹಿತಿಯನ್ನು ಇದೇ ವೆಬಸೈಟ್‌ನಲ್ಲಿ ತುಂಬಿ ಪುಸ್ತಕ ಖರೀದಿಗಾಗಿ ಆದೇಶವನ್ನು (ORDER) ಸಲ್ಲಿಸುವುದು .

ತದನಂತರ ವಿತಾವಿಯಿಂದ ಪುಸ್ತಕಗಳನ್ನು ಕಾಲೇಜಿಗೆ ನೇರವಾಗಿ ಕಳುಹಿಸಿಕೊಡಲಾಗುವುದು. ಸದರಿ ಪುಸ್ತಕಗಳ ಕುರಿತಾದ ಎಲ್ಲ ಮಾಹಿತಿಗೆ ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು - 9731220016.

ಕುಲಸಚಿವರು

**ಪ್ರತಿ:-**

1) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿತಾವಿ ಇವರ ದಯಾಪರ ಅವಗಾಹಣೆಗೆ.
2) ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ವಿತಾವಿ ಇವರ ದಯಾಪರ ಅವಗಾಹಣೆಗೆ.
3) ಕುಲಸಚಿವರು (ಪರೀಕ್ಷಾಂಗ), ವಿತಾವಿ ಇವರ ದಯಾಪರ ಅವಗಾಹಣೆಗೆ.
4) ಹಣಕಾಸು ಅಧಿಕಾರಿಗಳು, ವಿತಾವಿ ಇವರ ದಯಾಪರ ಅವಗಾಹಣೆಗೆ.
5) ವಿಶೇಷ ಅಧಿಕಾರಿಗಳು ಸಿ.ಎನ್.ಸಿ. ವಿಭಾಗ ವಿತಾವಿ ಸೂಕ್ತ ಕ್ರಮಕ್ಕಾಗಿ..
6) ನಿರ್ದೇಶಕರು, ಪ್ರಸಾರಾಂಗ ವಿ.ತಾವಿ., ಸೂಕ್ತ ಕ್ರಮಕ್ಕಾಗಿ.